# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಸಿ7(8)ಪ್ರಾ.ಶಿ.ಅ/ಆರ್.ಟಿ.ಇ/ದಾಖಲಾತಿ/473/2015-16 ದಿನಾಂಕ: 18-05-2016

## : : ಸುತ್ತೋಲೆ: :

**ವಿಷಯ:** ಆರ್.ಟಿ.ಇ ಅಡಿ ಆಯ್ಕೆಯಾದ ವಿದ್ಯಾರ್ಥಿಗಳ ದಾಖಲಾತಿ ಕುರಿತು.

*******

ಆರ್.ಟಿ.ಇ ಕಾಯಿದೆಯಡಿ ರಾಜ್ಯಾದ್ಯಂತ 1,01000 ಸೀಟುಗಳನ್ನು ಹಂಚಿಕೆ ಮಾಡಲಾಗಿದೆ. ದಾಖಲಾತಿ ಮಾಡಿಕೊಳ್ಳಲು ದಿನಾಂಕ: 10.05.2016 ರಿಂದ 20.05.2016 ರವರೆಗೆ ಸಮಯ ನೀಡಲಾಗಿತ್ತು, ಆದರೂ ಸಹ ಈವರೆಗೆ ದಾಖಲಾತಿ ವೆಬ್‌ಪೋರ್ಟಲ್ ಮಾಹಿತಿಯಂತೆ 4000 ವಿದ್ಯಾರ್ಥಿಗಳು ದಾಖಲುಗೊಂಡಿರುತ್ತಾರೆ. ಎರಡನೇ ಸುತ್ತಿನ ಆನ್‌ಲೈನ್ ಲಾಟರಿ ಪ್ರಕ್ರಿಯೆ ಶೀಘ್ರ ಪ್ರಾರಂಭಿಸಲು, ಇಲಾಖೆಯು, ಪೋಷಕರು ಮತ್ತು ಶಾಲೆಯವರೊಂದಿಗೆ ಸಮನ್ವಯಗೊಳಿಸುವ ಮೂಲಕ ದಾಖಲಾತಿ ಪ್ರಕ್ರಿಯೆಯನ್ನು ಚುರುಕುಗೊಳಿಸುವುದು ಅಗತ್ಯವಾಗಿದೆ, ಈ ಕೆಳಕಂಡ ಸೂಚನೆಗಳನ್ನು ಕೂಡಲೇ ಪಾಲಿಸುವುದು.

1. ಆರ್.ಟಿ.ಇ ಸೀಟು ಹಂಚಿಕೆಯಾಗಿರುವ ಅನುದಾನರಹಿತ ಶಾಲಾ ಪ್ರತಿನಿಧಿಗಳ ಸಭೆಯನ್ನು ತಾಲ್ಲೂಕು ಹಂತದಲ್ಲಿ ತಹಶಿಲ್ದಾರ್‌ರವರು ಮತ್ತು ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿಗಳ ಮಾರ್ಗದರ್ಶನದಲ್ಲಿ ಸಭೆಯನ್ನು ಕರೆಯುವಂತೆ ಸೂಚನೆ ಹೊರಡಿಸುವ ಸಂಬಂಧ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಸೂಚನೆ ಹೊರಡಿಸುವ ಸಂಬಂಧ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಮತ್ತು ತಹಸೀಲ್ದಾರ್‌ರವರು ಅಧಿಕಾರಿಗಳನ್ನು ಕೋರುವಂತೆ ಉಪನಿರ್ದೇಶಕರು(ಆಡಳಿತ) ಇವರಿಗೆ ಸೂಚಿಸಿದೆ.
2. ತಾಲ್ಲೂಕು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ತಹಶೀಲ್ದಾರ್‌ರವರು ದಿನಾಂಕ:19-05-2016 ರಂದು ತಪ್ಪದೇ ಸಭೆಯನ್ನು ಆಯೋಜಿಸಲು ಸಮನ್ವಯ ಕ್ರಮ ವಹಿಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದೆ.
3. ದಿನಾಂಕ: 07.05.2016 ಮತ್ತು 13.05.2016 ರಂದು ನೀಡಿದ ಪರಿಷ್ಕೃತ ಸುತ್ತೋಲೆ ಮತ್ತು ಆನ್-ಲೈನ್ ಪೋರ್ಟಲ್‌ನಲ್ಲಿಯ ಮಾಹಿತಿಯನ್ನು ಅನುದಾನರಹಿತ ಶಾಲೆಗಳಿಗೆ ನೀಡಲು ಸೂಚಿಸಿದೆ.
4. ಅನುದಾನರಹಿತ ಶಾಲೆಗಳಲ್ಲಿ ದಾಖಲಾತಿ ಪ್ರಕ್ರಿಯೆಯ ವೇಗವನ್ನು ಚುರುಕುಗೊಳಿಸಲು ಮತ್ತು ದಾಖಲಾತಿಯನ್ನು ಆನ್‌ಲೈನ್ ಪೋರ್ಟಲ್‌ನಲ್ಲಿ ಅಪ್‌ಡೇಟ್ ಆಗುವಂತೆ ಕ್ರಮ ವಹಿಸಲು ಬಿ.ಆರ್.ಪಿಗಳು ಮತ್ತು ಸಿ.ಆರ್.ಪಿಗಳು ಶಾಲೆಗಳೊಂದಿಗೆ ಸಮನ್ವಯಗೊಳಿಸುವ ಬಗ್ಗೆ ಕ್ರಮ ವಹಿಸುವುದು.
5. ಆರ್.ಟಿ.ಇ ಅಡಿಯಲ್ಲಿ ಆಯ್ಕೆಯಾಗಿ ದಾಖಲಾತಿಗೆ ಶಾಲೆಗಳಿಗೆ ಬೇಟಿ ನೀಡಿದ ಪೋಷಕರ ದಾಖಲಾತಿಗಳನ್ನು ಪರಿಶೀಲಿಸಿ, ಪ್ರವೇಶ ನೀಡಬೇಕು, ನಿರಾಕರಿಸುವಂತಿಲ್ಲ. ಒಂದು ವೇಳೆ ಪೋಷಕರ ವಾಸ ಸ್ಥಳ ಮತ್ತು ಶಾಲೆ ಇರುವ ವಾರ್ಡ್ ಬೇರೆ ಬೇರೆ ಆಗಿದ್ದಲ್ಲಿ ನಿರಾಕರಿಸಿದ ಬಗ್ಗೆ

ಪೋಷಕರಿಗೆ ಹಿಂಬರಹ ನೀಡುವುದು. ಪೋಷಕರು ಹಿಂಬರಹದೊಂದಿಗೆ ಜಿಲ್ಲಾ ಸಮಿತಿಯನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿದೆ.

6. ಕ್ರೋಢೀಕೃತ ದಾಖಲಾತಿ ಮಾಹಿತಿಯನ್ನು ದಿನಾಂಕ: 20.05.2016 ಮತ್ತು ಆನ್‌ಲೈನ್ ದಾಖಲಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಎಷ್ಟು ದಿನಗಳ ಕಾಲಾವಕಾಶ ಬೇಕಾಗಬಹುದು ಎಂಬುದರ ಬಗ್ಗೆ ವರದಿಯನ್ನು ಸಲ್ಲಿಸಲು ಉಪನಿರ್ದೇಶಕರು(ಆಡಳಿತ) ಇವರಿಗೆ ಸೂಚಿಸಿದೆ.
7. ದಿನಾಂಕ: 07.05.2016 ಮತ್ತು 13.05.2016 ರ ಸುತ್ತೋಲೆಯಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಬಿ.ಆರ್.ಪಿಗಳು ಆರ್.ಟಿ.ಇ ಅಡಿ ಆಯ್ಕೆಯಾಗಿರುವುದನ್ನು ತಿರಸ್ಕರಿಸಲು ಅಧಿಕಾರವಿರುವುದಿಲ್ಲ. ಆಯ್ಕೆ ಪಟ್ಟಿಯಲ್ಲಿ ಯಾವುದಾದರೂ ನ್ಯೂನ್ಯತೆಗಳು ಕಂಡುಬಂದಲ್ಲಿ, ಜಿಲ್ಲಾ ಸಮಿತಿಯ ಅವಗಾಹನೆಗೆ ತರತಕ್ಕದ್ದು, ಜಿಲ್ಲಾ ಸಮಿತಿಯ ತೀರ್ಮಾನ ತೆಗೆದುಕೊಳ್ಳುತ್ತದೆ.

(ವಿ.ಪೊನ್ನುರಾಜ್, ಭಾಆಸೇ)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

**ರವರಿಗೆ,**

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಶಿಕ್ಷಣ ನಿಯಂತ್ರಣಾ ಪ್ರಾಧಿಕಾರ.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಹಾಗೂ ಸದಸ್ಯರು ಜಿಲ್ಲಾ ಶಿಕ್ಷಣ ನಿಯಂತ್ರಣಾ ಪ್ರಾಧಿಕಾರ.
3. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
4. ಎಲ್ಲಾ ಆಯುಕ್ತರು, ಎಲ್ಲಾ ಮಹಾನಗರ ಪಾಲಿಕೆಗಳು,
5. ಎಲ್ಲಾ ಆಯುಕ್ತರು, ನಗರ ಸಭೆ.
6. ಎಲ್ಲಾ ಮುಖ್ಯಾಧಿಕಾರಿಗಳು, ನಗರ ಸಭೆ ಮತ್ತು ಪಟ್ಟಣ ಪಂಚಾಯತಿಗಳು
7. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) , ಸಾರ್ವಜನಿಕ ಶಿಕ್ಷಣ ಇಲಾಖೆ
8. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ(ಉಪನಿರ್ದೇಶಕರು(ಆಡಳಿತ)) ಇವರ ಮುಖಾಂತರ
9. ಕಛೇರಿ ಪ್ರತಿ.